**ವಾಕ್ಯರಣ ಭಾಗ**

## ವರ್ಣಮಾಲೆ

ಕನ್ನಡದಲ್ಲಿ ಒಟ್ಟು 49 ಅಕ್ಷರಗಳಿವೆ. ಇವುಗಳನ್ನು ವರ್ಣಗಳೆಂದು ಕರೆಯುತ್ತಾರೆ. ಈ ಅಕ್ಷರಗಳ ಕ್ರಮಬದ್ಧ ಜೋಡಣೆಗೆ ' ವರ್ಣಮಾಲೆ' ಎಂದು ಹೆಸರು.

**ವರ್ಣಮಾಲೆಯಲ್ಲಿ ಮೂರು ವಿಧಗಳು**

**ಅ.** ಸ್ವರಾಕ್ಷರಗಳು **ಆ.** ವ್ಯಂಜನಾಕ್ಷರಗಳು **ಇ.** ಯೋಗವಾಹಗಳು

**ಅ. ಸ್ವರಾಕ್ಷರಗಳು–** ಸ್ವತಂತ್ರವಾಗಿ ಉಚ್ಚರಿಸಲಾಗುವ ಅಕ್ಷರಗಳು ಸ್ವರಾಕ್ಷರಗಳಾಗಿವೆ.

ಒಟ್ಟು ಸ್ವರಾಕ್ಷರಗಳು– 13

**ಸ್ವರಗಳಲ್ಲಿ ಎರಡು ವಿಧಗಳು**

ಹ್ರಸ್ವಸ್ವರಗಳು ದೀರ್ಘಸ್ವರಗಳು

1. ಹ್ರಸ್ವಸ್ವರಗಳು– ಒಂದು ಮಾತ್ರ ಕಾಲದಲ್ಲಿ ಉಚ್ಚರಿಸಲಾಗುವ ಅಕ್ಷರಗಳು ಹ್ರಸ್ವಸ್ವರಗಳು.

ಅವು– **ಅ ಇ ಉ ಋ ಎ ಒ**

2. ದೀರ್ಘಸ್ವರಗಳು– ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲಾಗುವ ಅಕ್ಷರಗಳು

ಅವು– **ಆ ಈ ಊ ಏ ಐ ಓ ಔ**

**ಆ. ವ್ಯಂಜನಾಕ್ಷರಗಳು –** ಸ್ವರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳು ವ್ಯಂಜನಾಕ್ಷರಗಳಾಗಿವೆ. ಇವು

ಒಟ್ಟು 34 ವ್ಯಂಜನಾಕ್ಷರಗಳು.

ವ್ಯಂಜನಾಕ್ಷರಗಳಲ್ಲಿ ಎರಡು ವಿಧಗಳು

ವರ್ಗೀಯ ವ್ಯಂಜನಗಳು ಅವರ್ಗೀಯ ವ್ಯಂಜನಗಳು

## 1. ವರ್ಗೀಯ ವ್ಯಂಜನಗಳು–

**ಕ್ ವರ್ಗ – ಕ್ ಖ್ ಗ್ ಘ್ ಙ್**

**ಚ್ ವರ್ಗ – ಚ್ ಛ್ ಜ್ ಝ್ ಞ್**

**ಟ್ ವರ್ಗ – ಟ್ ಠ್ ಡ್ ಢ್ ಣ್**

**ತ್ ವರ್ಗ – ತ್ ಥ್ ದ್ ಧ್ ನ್**

**ಪ್ ವರ್ಗ – ಪ್ ಫ್ ಬ್ ಭ್ ಮ್**

* **ಅಲ್ಪಪ್ರಾಣಾಕ್ಷರಗಳು –** ಕಡಿಮೆ ಉಸಿರು ಕೊಟ್ಟು ಉಚ್ಚರಿಸಲಾಗುವ ವ್ಯಂಜನಗಳು ಅಲ್ಪಪ್ರಾಣಾಕ್ಷರಗಳು.

ಉದಾ: ಕ ಚ ಟ ತ ಪ

ಗ ಜ ಡ ದ ಬ

* **ಮಹಾಪ್ರಾಣಾಕ್ಷರಗಳು–** ಹೆಚ್ಚು ಉಸಿರು ಕೊಟ್ಟು ಉಚ್ಚರಿಸಲಾಗುವ ವ್ಯಂಜನಗಳು ಮಹಾಪ್ರಾಣಾಕ್ಷರಗಳಾಗಿವೆ.

ಉದಾ: ಖ ಛ ಠ ಥ ಫ

ಘ ಝ ಢ ಧ ಭ

***ಅನುನಾಸಿಕಾಕ್ಷರಗಳು** – ಮೂಗಿನ ಸಹಾಯದಿಂದ ಉಚ್ಚರಿಸಲಾಗುವ ವ್ಯಂಜನಗಳು ಅನುನಾಸಿಕಾಕ್ಷರಗಳು.

**ಉದಾ – ಙ್ ಞ್ ಣ್ ನ್ ಮ್**

**2. ಅವರ್ಗೀಯ ವ್ಯಂಜನಗಳು–** 'ಯ್' ಕಾರದಿಂದ 'ಳ್' ಕಾರದವರೆಗಿನ 09 ಅಕ್ಷರಗಳು ಅವರ್ಗೀಯ ವ್ಯಂಜನಗಳಾಗಿವೆ.

**ಉದಾ – ಯ್ ರ್ ಲ್ ವ್ ಶ್ ಷ್ ಸ್ ಹ್ ಳ್**

**3. ಯೋಗವಾಹಗಳು** – 'ಯೋಗವಾಹ' ಎಂದರೆ 'ಜೊತೆಗೂಡಿ ಹೋಗು' ಎಂದರ್ಥ. ಇವು ಯಾವುದಾದರೂ ಒಂದು ಸ್ವರಾಕ್ಷರದ ಜೊತೆಗೆ ಕೂಡಿಕೊಂಡರೆ ಮಾತ್ರ ಉಚ್ಚರಿಸಲು ಸಾಧ್ಯವಾಗುತ್ತದೆ.

**ಯೋಗವಾಹಗಳಲ್ಲಿ ಎರಡು ವಿಧಗಳು**

**ಅನುಸ್ವಾರ (ಂ) ವಿಸರ್ಗ (ಃ)**

**ಉದಾ– ಕಂಬನಿ ದುಃಖ**

---

**ಸಂಯುಕ್ತಾಕ್ಷರಗಳು**

ಸಜಾತೀ ಸಂಯುಕ್ತಾಕ್ಷೆರ – ಒಂದೇ ಜಾತಿಯ ಎರಡು ವ್ಯಂಜನಗಳು ಸ್ವರದ ಸಹಾಯದಿಂದ ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ಸಜಾತೀ ಸಂಯುಕ್ತಾಕ್ಷೆರ.

ಉದಾ– ಅಪ್ಪ ಅಮ್ಮ ಲೆಕ್ಕ ಕಗ್ಗ

ವಿಜಾತೀ ವಿಜಾತೀ ಸಂಯುಕ್ತಾಕ್ಷೆರ– ಬೇರೆ ಬೇರೆ ಜಾತಿಯ ವ್ಯಂಜನಗಳು ಸ್ವರದ ಸಹಾಯದಿಂದ ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷೆರ ವಿಜಾತೀ ಸಂಯುಕ್ತಾಕ್ಷೆರ.

ಉದಾ– ಅಷ್ಟ ಆರ್ಯ ಅಸ್ತ್ರ

---

**ಲಿಂಗಗಳು**

ಯಾವ ನಾಮಪದವನ್ನು ಬಳಸಿದಾಗ ಗಂಡಸು ,ಹೆಂಗಸೂ ಅಥವಾ ಎರಡು ಅಲ್ಲದ ಅರ್ಥ ಹೊಳೆದರೆ ಅವುಗಳನ್ನು ಲಿಂಗವಾಚಕಗಳೆಂದು ಕರೆಯುತ್ತಾರೆ.

ಲಿಂಗಗಳಲ್ಲಿ ಮೂರು ವಿಧಗಳು

1. ಪುಲ್ಲಿಂಗ – ಯಾವ ಪದವನ್ನು ಪ್ರಯೋಗ ಮಾಡಿದಾಗ 'ಗಂಡಸು' ಎಂಬ ಅರ್ಥ ಹೊಳೆಯುವುದೋ ಅದನ್ನು ಪುಲ್ಲಿಂಗ ಎನ್ನುವರು.

2. ಸ್ತ್ರೀಲಿಂಗ – ಯಾವ ಪದವನ್ನು ಪ್ರಯೋಗ ಮಾಡಿದಾಗ 'ಸ್ತ್ರೀ' ಎಂಬ ಅರ್ಥ ಹೊಳೆಯುವುದೋ ಅದನ್ನು ಸ್ತ್ರೀಲಿಂಗ ಎನ್ನುವರು.

3. ನಪುಂಸಕಲಿಂಗ – ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಹೆಂಗಸು ,ಗಂಡಸೂ ಎರಡೂ ಅಲ್ಲದ ಅರ್ಥವೂ ಹೊಳೆದರೆ ಅದು ನಪುಂಕಲಿಂಗ.

| | ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|---|
| 1 | ತಂದೆ | ತಾಯಿ | ಗಿಡ |
| 2 | ಅಣ್ಣ | ಅಕ್ಕ | ಬೆಟ್ಟ |
| | ಪಂಡಿತ | ಪಂಡಿತೆ | ನವಿಲು |
| | ರಾಜ | ರಾಣಿ | ಗಿಳಿ |
| | ಕವಿ | ಕವಿಯತ್ರಿ | ಪುಸ್ತಕ |
| | ಶಿಕ್ಷಕ | ಶಿಕ್ಷಕಿ | ಮೇಜು |
| | ನಟ | ನಟಿ | ಪೆನ್ನು |
| | ತಾತ | ಅಜ್ಜಿ | ಪೆನ್ಸಿಲ್ |
| | ನಾಯಕ | ನಾಯಕಿ | ಕುರ್ಚಿ |
| | ಗಾಯಕ | ಗಾಯಕಿ | ಮಗು |
| | ಪುತ್ರ | ಪುತ್ರಿ | ನೀರು |
| | ದೊಡ್ಡಪ್ಪ | ದೊಡ್ಡಪ್ಪ | ದಾರ |
| | ಚಿಕ್ಕಪ್ಪ | ಚಿಕ್ಕಪ್ಪ | ಎಲೆ |
| | ಮಾವ | ಅತ್ತೆ | ಕಲ್ಲು |
| | ಶಿಷ್ಯ | ಶಿಷ್ಯೆ | ಚೀಲ |
| | ವಿದ್ಯಾರ್ಥಿ | ವಿದ್ಯಾರ್ಥಿನಿ | ಆಕಳು |
| | ಹುಡುಗ | ಹುಡುಗಿ | ಮರ |
| | ಗೆಳೆಯ | ಗೆಳತಿ | ಗುಡ್ಡ |
| | ಅವನು | ಅವಳು | ಕುದುರೆ |
| | ಕೃಷ್ಣ | ರಾಧಾ | |

**ವಿರುದ್ಧಾರ್ಥಕ ಪದಗಳು**

1. ಸ್ವಾಭಾವಿಕ X ಅಸ್ವಾಭಾವಿಕ
2. ಸಮ್ಮತಿ X ಅಸಮ್ಮತಿ
3. ಸ್ಥಿರ X ಅಸ್ಥಿರ
4. ವಿಶ್ರಾಂತಿ X ಅವಿಶ್ರಾಂತಿ
5. ಅಪರಾಧಿ X ನಿರಪರಾಧಿ
6. ಆಯಾಸ X ನಿರಾಯಾಸ
7. ಆಧಾರ X ನಿರಾಧಾರ
8. ಆಶ್ರಿತ X ನಿರಾಶ್ರಿತ
9. ದೋಷಿ X ನಿರ್ದೋಷಿ
10. ಸನ್ಮಾನ X ಅವಮಾನ
11. ಸುಗುಣ ದುರ್ಗುಣ

13. ಪುರಸ್ಕರಿಸು X ತಿರಸ್ಕರಿಸು
14. ಕನಿಷ್ಠ X ಗರಿಷ್ಠ
15. ಜಂಗಮ X ಸ್ಥಾವರ
16. ತಂಪು X ಬಿಸಿ
17. ನಿಂದಿಸು X ಸ್ತುತಿಸು
18. ನಗು X ಅಳು
19. ಜಾಣ X ದಡ್ಡ
20. ಸಂಸ್ಕೃತ X ಅ.ಸಂಸ್ಕೃತ

ಪ್ರಬಲ X ದುರ್ಬಲ

**ತತ್ಸಮ ತದ್ಭವ ಪದಗಳು**

1. ವರ್ಷ – ವರುಷ
2. ಶಕ್ತಿ – ಶಕುತಿ
3. ಧ್ವನಿ – ದನಿ
4. ಆಸೆ – ಆಸೆ
5. ವಸತಿ – ಬಸದಿ
6. ಕುಠಾರ – ಕೊಡಲಿ
7. ವಿಜ್ಞಾನ – ಬಿನ್ನಾಣ
8. ಕೋಕಿಲ – ಕೋಗಿಲೆ
9. ಕ್ಷೌರ – ಚೌರ
10. ತಾಂಬೂಲ – ತಂಬೂಲ
11. ತಪಸ್ವಿ – ತವಸಿ
12. ದಿಶಾ –ದಿಸೆ
13. ನಿಧಾನ – ನಿದಾನ
14. ಪಿಸುಣ – ಹಿಸುಣ
15. ಅಕ್ಷರ –ಅಕ್ಕರ
16. ಕಾವ್ಯ –ಕಬ್ಬ
17. ವೀರ –ಬೀರ
18. ವೇಷ – ವೇಸ
19. ಪರೀಕ್ಷಿಸು – ಪರಿಕಿಸು
20. ಪಗೆ – ಹಗೆ
21. ಐಶ್ವರ್ಯ – ಐಸಿರಿ
22. ಶಿರ – ಸಿರ
23. ಕಂಬಲ – ಕಂಬಳಿ

**ಸಮಾನಾರ್ಥಕ ಪದಗಳು**

* ಒಂದು ಶಬ್ದಕ್ಕೆ ಸಮಾನವಾದ ಅರ್ಥವನ್ನು ಕೊಡುವ ಮತ್ತೊಂದು ಶಬ್ದಕ್ಕೆ ಸಮಾನಾರ್ಥಕ ಪದ ಎನ್ನವರು.

**ಉದಾಹರಣೆಗಳು–**

1. ದಾರಿ – ಮಾರ್ಗ ಹಾದಿ
2. ಸಿಂಹ – ಮೃಗರಾಜ ಕೇಸರಿ
3. ಕಮಲ – ತಾವರೆ ಪಂಕಜ
4. ತನು – ಶರೀರ ದೇಹ
5. ರಾಕ್ಷಸ – ಅಸುರ ದೈತ್ಯ
6. ಆಕಾಶ – ಗಗನ ಅಂಬರ
7. ಬೆಟ್ಟ – ಗಿರಿ ಪರ್ವತ
8. ಪವನ – ಗಾಳಿ ವಾಯು
9. ಸರಸ್ವತಿ – ವಾಣಿ ಶಾರದೆ
10. ಹೂವು – ಕುಸುಮ ಸುಮ
11. ಸಮುದ್ರ – ಕಡಲು ಜಲಧಿ
12. ಚಂದ್ರ – ಶಶಿ ತಿಂಗಳು
13. ಭೂಮಿ – ಧರೆ ಅವನಿ
14. ಬೆಂಕಿ – ಅಗ್ನಿ ಪಾವಕ
15. ಲಕ್ಷ್ಮೀ – ಸಿರಿ ಪದ್ಮಾ